# ಬಿಐಇಟಿಯಲ್ಲಿ ಇಂದು ವಿಶ್ವ ಪರಿಸರ ದಿನ

Janathavani27-06-2022

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ವಿಶ್ವ ಪರಿಸರ ದಿನಾಚರಣೆ ನಡೆಯಲಿದೆ.

ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ (ಇಂಡಿಯ) ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷ ಎಂ. ಲಕ್ಷ್ಮಣ, ಕಾರ್ಯದರ್ಶಿ ಡಾ. ಎನ್.ಟಿ. ರಂಗಾರೆಡ್ಡಿ ಮತ್ತು ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸುವರು. ಡಾ. ಜಿ.ಪಿ. ದೇಸಾಯಿ, ಕಾರ್ಯದರ್ಶಿ ಡಾ. ಎಸ್. ಸುರೇಶ್ ಉಪಸ್ಥಿತರಿರುವರು ಎಂದು ಸಾರ್ವಜನಿಕ ಸಂಪರ್ಕ ಡೀನ್ ಜಿ.ಪಿ. ದೇಸಾಯಿ ತಿಳಿಸಿದ್ದಾರೆ.

# ಬಿಐಇಟಿ ಪರಿಸರ ದಿನ ಇಂದು

**ದಾವಣಗೆರೆ:** ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಎಸ್.ಎಸ್ ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಜೂ.27ರಂದು ಬೆಳಗ್ಗೆ 10.30ಕ್ಕೆ ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ ರಾಜ್ಯ ಕೇಂದ್ರದ ಅಧ್ಯಕ್ಷ ಎಂ. ಲಕ್ಷ್ಮಣ, ಕಾರ್ಯದರ್ಶಿ ಡಾ.ಎನ್.ಟಿ. ರಂಗಾರೆಡ್ಡಿ ಮತ್ತು ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ, ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಅಧ್ಯಕ್ಷತೆ ವಹಿಸುವರು. ಡಾ.ಜಿ.ಪಿ. ದೇಸಾಯಿ, ಕಾರ್ಯದರ್ಶಿ ಡಾ.ಎಸ್. ಸುರೇಶ್ ಹಾಗೂ ಸದಸ್ಯರು ಉಪಸ್ಥಿತರಿರುವರು.

Vijayakarnataka 27-06-2022

# ಕಾಮಗಾರಿಗಳಲ್ಲಿ ಪರಿಸರದ ಕಾಳಜಿಯೂ ಇರಲಿ

## ಇಂಜಿನಿಯರ್‌ಗಳಿಗೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ರಾಜ್ಯಾಧ್ಯಕ್ಷ ಎಂ. ಲಕ್ಷ್ಮಣ ಕರೆ

ದಾವಣಗೆರೆ, ಜೂ. 27 - ನಗರ ಯೋಜನೆ, ಕಸ ವಿಲೇವಾರಿ, ನದಿಗಳನ್ನು ಕಾಪಾಡುವುದೂ ಸೇರಿದಂತೆ ಎಲ್ಲ ಪರಿಸರ ವಲಯಗಳನ್ನು ರಕ್ಷಿಸುವಲ್ಲಿ ಇಂಜಿನಿಯರ್‌ಗಳು ಸಕ್ರಿಯವಾಗಿ ಕೊಡುಗೆ ನೀಡಬೇಕಿದೆ ಎಂದು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ರಾಜ್ಯ ಘಟಕದ ಅಧ್ಯಕ್ಷ ಎಂ. ಲಕ್ಷ್ಮಣ ಕರೆ ನೀಡಿದ್ದಾರೆ.

ಬಿಐಇಟಿ ಕಾಲೇಜಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಐ) ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಐ.ಎ.ಎಸ್. ಉತ್ತೀರ್ಣರಾಗುವವರಲ್ಲಿ ಬಹುತೇಕರು ಇಂಜಿನಿಯರ್‌ಗಳಾಗಿದ್ದಾರೆ. ರಾಜಕಾರಣಿಗಳು ಶೇ.99ರಷ್ಟು ವಿಷಯಗಳಲ್ಲಿ ಐ.ಎ.ಎಸ್. ಅಧಿಕಾರಿಗಳ ಮಾತುಗಳನ್ನೇ ಕೇಳುತ್ತಾರೆ. ಇಷ್ಟಾದರೂ, ಇಂಜಿನಿಯರ್‌ಗಳು ಪರಿಸರ ರಕ್ಷಣೆ ವಿಷಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸಲಹೆ ನೀಡಲು ಹಾಗೂ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಿಲ್ಲ ಎಂದವರು ವಿಷಾದಿಸಿದರು.

ಸರ್ಕಾರದ ಬಜೆಟ್‌ನ ಶೇ.90ರಷ್ಟು ಹಣ ವಿನಿಯೋಗ ಇಂಜಿನಿಯರ್‌ಗಳ ಮೂಲಕವೇ ನಡೆಯುತ್ತದೆ. ಇಂಜಿನಿಯರ್‌ಗಳು ಸರ್ಕಾರದ ಯೋಜನೆಗಳನ್ನು ಜಾರಿಗೆ ತರುವಲ್ಲಿನ ಗುಣಮಟ್ಟದ ಬಗ್ಗೆಯಷ್ಟೇ ಯೋಚಿಸದೇ, ಅದರಿಂದ ಪರಿಸರದ ಮೇಲೆ ಆಗುವ ಪರಿಣಾಮಗಳನ್ನೂ ಪರಿಗಣಿಸಬೇಕು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಐ) ಗೌರವ ಕಾರ್ಯದರ್ಶಿ ಡಾ. ರಂಗಾ ರೆಡ್ಡಿ, ಗಂಗಾ ನದಿ ಶುದ್ಧೀಕರಣಕ್ಕೆ ಸಾವಿರಾರು ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇಷ್ಟಾದ ನಂತರವೂ ಗಂಗಾ ನದಿ ಸಾಕಷ್ಟು ಕಡೆ ಕುಡಿಯಲು ಯೋಗ್ಯವಾಗಿಲ್ಲ. ಇಂತಹ ನದಿಗಳ ಸಂರಕ್ಷಣೆಯ ಬಗ್ಗೆ ಇಂಜಿನಿಯರ್‌ಗಳು ತುರ್ತು ಗಮನ ಹರಿಸಬೇಕಿದೆ ಎಂದರು.

ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಮುಂದಿನ ವರ್ಷಗಳಲ್ಲಿ ಭೂಮಿಯ ಫಲವತ್ತತೆ ಸಂಪೂರ್ಣ ನಾಶವಾಗುವ ಅಪಾಯವಿದೆ. ಹೀಗಾಗಿ ಭೂ ಫಲವತ್ತತೆ ಉಳಿಸಲು ಅಗತ್ಯ ಕ್ರಮಗಳನ್ನು ಈಗಿನಿಂದಲೇ ತೆಗೆದುಕೊಳ್ಳಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಮಾತನಾಡಿ, ಕುಂದುವಾಡ ಕೆರೆ ಮರು ನಿರ್ಮಾಣದಲ್ಲಿ ಬಿ.ಐ.ಇ.ಟಿ.ಯ ಸಿವಿಲ್ ಇಂಜಿನಿಯರಿಂಗ್ ವಿಭಾಗ ಭಾಗಿಯಾಗಿತ್ತು. 2002ರಲ್ಲಿ ಕುಂದುವಾಡ ಕೆರೆ ವಿಸ್ತರಿಸಿದ ಕಾರಣ ನಗರದಲ್ಲಿ ಅಂತರ್ಜಲ ಸುಧಾರಿಸಿದೆ. ಈ ರೀತಿಯ ಸಮಾಜಮುಖಿ ಯೋಜನೆಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು.

ವೇದಿಕೆಯ ಮೇಲೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ಜಿಲ್ಲಾ ಕೇಂದ್ರದ ಅಧ್ಯಕ್ಷ ಡಾ. ಜಿ.ಪಿ. ದೇಸಾಯಿ ಉಪಸ್ಥಿತರಿದ್ದರು.

ಡಾ. ವೀಣಾ ಆದಿ ಪ್ರಾರ್ಥಿಸಿದರು. ಡಾ. ಎಂ. ಎಸ್. ನಾಗರಾಜ್ ಸ್ವಾಗತಿಸಿದರು. ಡಾ. ಸಿ.ಪಿ. ಅನಿಲ ಕುಮಾರ್ ನಿರೂಪಿಸಿದರೆ, ಡಾ. ಎಸ್. ಸುರೇಶ್ ವಂದಿಸಿದರು.



### ನಿವೇಶನಗಳಿಂದಾಗಿ ಪರಿಸರ ನಾಶ

#### ಬಹುಮಹಡಿ ಮನೆಗಳೇ ದೇಶಕ್ಕೆ ಸೂಕ್ತ

ದೇಶದಲ್ಲಿ ವಸತಿಗಾಗಿ ಜಾಗದ ಲಭ್ಯತೆ ಸಾಕಷ್ಟು ಕಡಿಮೆಯಾಗಿದೆ. ಇಷ್ಟಾದರೂ ಜನರು ಪ್ರತ್ಯೇಕ ನಿವೇಶನವೇ ಬೇಕು ಎನ್ನುತ್ತಿದ್ದಾರೆ. ಇದರಿಂದಾಗಿ ಪರಿಸರ ನಾಶವಾಗುತ್ತಿದೆ ಎಂದು ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅಭಿಪ್ರಾಯ ಪಟ್ಟಿದ್ದಾರೆ.

ಬಹುಮಹಡಿ ಮನೆಗಳ ನಿರ್ಮಾಣದಿಂದ ಕಡಿಮೆ ಜಾಗದಲ್ಲೇ ಹೆಚ್ಚು ಜನರಿಗೆ ಮನೆಗಳನ್ನು ಕಲ್ಪಿಸಬಹುದು ಎಂಬುದಕ್ಕೆ ನಗರದ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ನಿರ್ಮಿಸಿರುವ ಬಹುಮಹಡಿ ಕಟ್ಟಡ ಉತ್ತಮ ಉದಾಹರಣೆ ಎಂದವರು ಹೇಳಿದರು. ವಿದೇಶಗಳಲ್ಲಿ ಬಿಡಿ ನಿವೇಶನಗಳಿಗೆ ಫ್ಲಾಟ್‌ಗಿಂತ ಹತ್ತು - ಇಪ್ಪತ್ತು ಪಟ್ಟು ಹೆಚ್ಚು ತೆರಿಗೆ ವಿಧಿಸಲಾಗುತ್ತದೆ. ಭಾರತದಲ್ಲೂ ಬಿಡಿ ನಿವೇಶನ ಮಾಲೀಕರಾಗುವ ಹಂಬಲ ಬಿಟ್ಟು ಬಹುಮಹಡಿ ಕಟ್ಟಡಗಳಲ್ಲಿ ಮನೆಗಳನ್ನು ಹೊಂದಬೇಕಿದೆ. ಇದರಿಂದ ಕಡಿಮೆ ಜಾಗದಲ್ಲಿ ಹೆಚ್ಚು ಜನರಿಗೆ ಆಶ್ರಯ ದೊರೆತು, ಪರಿಸರ ರಕ್ಷಣೆಯಾಗುತ್ತದೆ ಎಂದರು.

### ಮರಗಳನ್ನು ಬೆಳೆಸಿದರೂ ಪರಿಸರ ಸುಧಾರಿಸದು

ಪರಿಸರ ದಿನಾಚರಣೆ ಎಂದರೆ ಸಸಿಗಳನ್ನು ನೆಡುವುದು ಎಂಬಂತಾಗಿದೆ. ಆದರೆ, ಮರಗಳನ್ನು ಸಮೃದ್ಧವಾಗಿ ಬೆಳೆಸಿದರೂ ಪರಿಸರ ಕಲುಷಿತವಾಗುವುದು ತಪ್ಪದು ಎಂಬುದಕ್ಕೆ ದೆಹಲಿ ಉದಾಹರಣೆಯಾಗಿದೆ ಎಂದು ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್(ಐ) ಗೌರವ ಕಾರ್ಯದರ್ಶಿ ಡಾ. ರಂಗಾ ರೆಡ್ಡಿ ಹೇಳಿದ್ದಾರೆ. ದೆಹಲಿಯಲ್ಲಿ ಶೇ.19ರಷ್ಟಿದ್ದ ಮರಗಳ ಪ್ರದೇಶ ಶೇ.32ಕ್ಕೆ ಹೆಚ್ಚಾಗಿದೆ. ಆದರೂ, ದೆಹಲಿ ವಿಶ್ವದ ಅತ್ಯಂತ ಕಲುಷಿತ ನಗರಗಳಲ್ಲಿ ಒಂದಾಗಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಪರಿಸರಕ್ಕಾಗಿ ಇಂಜಿನಿಯರ್‌ಗಳು ಸಮಗ್ರ ಯೋಜನೆ ರೂಪಿಸಿ, ಜಾರಿಗೆ ತರಬೇಕಿದೆ ಎಂದವರು ತಿಳಿಸಿದರು.

Samyuktha Karnataka 28-06-2022

# ಇಂಜಿನಿಯರ್ಸ್ ಸಮಾಜಮುಖಿ ಕೆಲಸ ಮಾಡಲಿ



ದಾವಣಗೆರೆ: ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲ ಹಂತಗಳಲ್ಲಿ ಇಂಜಿನಿಯರ್‌ಗಳು ಸಮಾಜಮುಖಿ ಯಾಗಿ ಕೆಲಸ ಮಾಡಬೇಕು. ಪರಿಸರ ಇಂಜಿನಿಯರಿಂಗ್ ವಿಷಯ ಕೇವಲ ಓದಿದರಷ್ಟೇ ಸಾಲದು, ಅದನ್ನು ಜಾರಿಗೂ ತರಬೇಕು ಎಂದು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ರಾಜ್ಯ ಘಟಕದ ಅಧ್ಯಕ್ಷ ಎಂ.ಲಕ್ಷ್ಮಣ ಅಭಿಪ್ರಾಯಪಟ್ಟರು.

ಬಿಐಇಟಿ ಕಾಲೇಜಿನಲ್ಲಿ ಇನ್‌ಸ್ಟಿಟ್ಯೂಟ್ ಆಫ್‌ಇಂಜಿನಿಯರ್ಸ್ (ಐ) ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇತ್ತೀಚೆಗೆ ಐಎಎಸ್‌ನಲ್ಲಿ ಹೆಚ್ಚು ಇಂಜಿನಿಯರ್ ಉತ್ತೀರ್ಣ ರಾಗುತ್ತಿದ್ದಾರೆ. ರಾಜಕಾರಣಿಗಳು ಶೇ.99ರಷ್ಟು ವಿಷಯಗಳಲ್ಲಿ ಐಎಎಸ್ ಅಧಿಕಾರಿಗಳ ಮಾತುಗಳನ್ನೇ ಕೇಳುತ್ತಾರೆ. ಇಷ್ಟಾದರೂ, ಇಂಜಿನಿಯರ್‌ಗಳು ಪರಿಸರ ರಕ್ಷಣೆ ವಿಷಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಯೋಜನೆ ಜಾರಿಗೆ ತರಲು ಮುಂದಾಗುತ್ತಿಲ್ಲ ಎಂದರು. ಸರ್ಕಾರದ ಬಜೆಟ್‌ನ ಶೇ.90ರಷ್ಟು ಹಣ ವಿನಿಯೋಗ ಇಂಜಿನಿಯರ್‌ಗಳ ಮೂಲಕವೇ ನಡೆಯುತ್ತದೆ. ಇಂಜಿನಿಯರ್‌ಗಳು ಸರ್ಕಾರದ ಯೋಜನೆ ಜಾರಿಗೆ ತರುವಲ್ಲಿನ ಗುಣಮಟ್ಟದ ಬಗ್ಗೆಯಷ್ಟೇ ಯೋಚಿಸದೇ, ಅದರಿಂದ ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ಪರಿಗಣಿಸಬೇಕೆಂದರು.

ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮಾತನಾಡಿ, ದೇಶದಲ್ಲಿ ವಸತಿಗಾಗಿ ಜಾಗದ ಲಭ್ಯತೆ ಸಾಕಷ್ಟು ಕಡಿಮೆಯಾಗಿದೆ. ಇಷ್ಟಾದರೂ ಜನರು ಪ್ರತ್ಯೇಕ ನಿವೇಶನವೇ ಬೇಕು ಎನ್ನುತ್ತಿದ್ದಾರೆ. ಇದರಿಂದಾಗಿ ಪರಿಸರ ನಾಶವಾಗುತ್ತಿದೆ ಎಂಧರು. ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಐ) ಗೌರವ ಕಾರ್ಯದರ್ಶಿ ಡಾ. ರಂಗಾ ರೆಡ್ಡಿ, ಗಂಗಾ ನದಿ ಶುದ್ಧೀಕರಣಕ್ಕೆ ಸಾವಿರಾರು ಕೋಟಿ ರೂ. ವೆಚ್ಚ ಮಾಡಲಾಗಿದೆ. ಇಷ್ಟಾದ ನಂತರವೂ ಗಂಗಾ ನದಿ ಸಾಕಷ್ಟು ಕಡೆ ಕುಡಿಯಲು ಯೋಗ್ಯವಾಗಿಲ್ಲ. ಇಂತಹ ನದಿಗಳ ಸಂರಕ್ಷಣೆಯ ಬಗ್ಗೆ ಇಂಜಿನಿಯರ್‌ಗಳು ತುರ್ತು ಗಮನ ಹರಿಸಬೇಕಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ.ಅರವಿಂದ ಅಧ್ಯಕ್ಷತೆ ವಹಿಸಿ, ಕುಂದುವಾಡ ಕೆರೆ ಮರು ನಿರ್ಮಾಣದಲ್ಲಿ ಬಿಐಇಟಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗ ಭಾಗಿಯಾಗಿತ್ತು. 2002ರಲ್ಲಿ ಕುಂದುವಾಡ ಕೆರೆ ವಿಸ್ತರಿಸಿದ ಕಾರಣ ನಗರದಲ್ಲಿ ಅಂತರ್ಜಲ ಸುಧಾರಿಸಿದೆ. ಈ ರೀತಿಯ ಸಮಾಜಮುಖಿ ಯೋಜನೆಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು. ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಐ) ಜಿಲ್ಲಾ ಕೇಂದ್ರದ ಅಧ್ಯಕ್ಷ ಡಾ.ಜಿ.ಪಿ.ದೇಸಾಯಿ, ಡಾ.ವೀಣಾ ಆದಿ, ಡಾ.ಎಂ.ಎಸ್. ನಾಗರಾಜ್, ಡಾ. ಸಿ.ಪಿ.ಅನಿಲ್‌ಕುಮಾರ್, ಪ್ರೊ.ವೈ.ವೃಷಬೇಂದ್ರಪ್ಪ ಇದ್ದರು.

Vijayakarnataka 29-06-2022



ದಾವಣಗೆರೆಯ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ್ ಇತರರಿದ್ದರು.

# ಬಿಐಇಟಿಯಲ್ಲಿ ವಿಶ್ವ ಪರಿಸರ ದಿನಾಚರಣೆ



ದಾವಣಗೆರೆ, ಜೂ. 4- ವಾಹನಗಳ ಓಡಾಟದಿಂದ ಕಾರ್ಬನ್ ಡೈ ಆಕ್ಸೈಡ್, ನೈಟ್ರೋಜನ್ ಆಕ್ಸೈಡ್ ಗಳು ಪರಿಸರ ಸೇರಿ 'ಹಸಿರು ಮನೆ ಪರಿಣಾಮ' ಉಂಟು ಮಾಡುತ್ತವೆ. ಈ ಜಾಗತಿಕ ತಾಪಮಾನ ಏರಿಕೆ ಯಿಂದಾಗಿ ಕಳೆದ 20 ವರ್ಷಗಳಲ್ಲಿ ದಾವಣಗೆರೆಯ ತಾಪಮಾನ 37 ಡಿಗ್ರಿಯಿಂದ 39 ಡಿಗ್ರಿಗೆ ಏರಿದೆ ಎಂದು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ವಿವರಿಸಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗ ಮತ್ತು ಎನ್.ಎಸ್.ಎಸ್. ಸಹಯೋಗದೊಂದಿಗೆ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗೋ ಗ್ರೀನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಪರಿಸರ ಜಾಗೃತಿ ಮತ್ತು ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಹಾಗು ಪರಿಸರ ಸಮತೋಲನದ ಬಗ್ಗೆ ಬೆಳಕು ಚೆಲ್ಲಿದರು.

ವಿಭಾಗದ ಮುಖ್ಯಸ್ಥ ಡಾ. ಜಿ. ಎಸ್. ಸುನೀತಾ ಮಾತನಾಡಿ, ಕಾಲೇಜು ಆವರಣದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಾಲ್ನಡಿಗೆಯಲ್ಲೇ ಚಲಿಸುವ ಮೂಲಕ ವಾಹನದ ಬಳಕೆಯನ್ನು ಸ್ವಲ್ಪವಾದರೂ ತಪ್ಪಿಸಿ, ಆರೋಗ್ಯ ಕಾಪಾಡಿಕೊಳ್ಳುವ ಸಲಹೆ ನೀಡಿದರು.

ಎನ್ನೆಸ್ಸೆಸ್ ಸಂಯೋಜಕ ಡಾ. ಟಿ. ಕೆ. ಕೃಷ್ಣ ಕುಮಾರ್ ಮಾತನಾಡಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪರಿಸರ ಉಳಿಸುವ ಕಾರ್ಯದಲ್ಲಿ ನಿರತರಾಗಬೇಕಾದ ತುರ್ತು ಅಗತ್ಯದ ಬಗ್ಗೆ ತಿಳಿಸಿದರು.

ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದ ವತಿಯಿಂದ ಇಲ್ಲಿಯವರೆಗೂ ಪರಿಸರ ಸಂಬಂಧಿತವಾಗಿ ಮಾಡಿರುವ ಯೋಜನೆಗಳನ್ನು ಅನಾವರಣ ಮಾಡಲಾಯಿತು.

ದಾವಣಗೆರೆ ಸ್ಮಾರ್ಟ್ ಸಿಟಿಯ 'ಕೂ ರೈಡ್ಸ್' ಸೈಕಲ್ ಬಳಕೆ ಮಾಡಿ ಪರಿಸರ ಸ್ನೇಹಿಯಾಗುವ ಬಗ್ಗೆ ಸಹಾಯಕ ಪ್ರಾಧ್ಯಾಪಕ ರಂಜಿತ್ ಪಾಟೀಲ್ ತಿಳಿಸಿದರು.

ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಸಿರು ವಸ್ತ್ರಗಳನ್ನು ಧರಿಸಿ ಬರುವುದರೊಂದಿಗೆ ಸಾಂಕೇತಿಕವಾಗಿ ಗಿಡ ನೆಡುವ ಮೂಲಕ ಪರಿಸರ ಉಳಿಸುವ ಪ್ರತಿಜ್ಞೆಯನ್ನು ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೈಗೊಂಡರು.

ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಭಾಗ್ಯ, ಸಹ ಪ್ರಾಧ್ಯಾಪಕರಾದ ಡಾ. ಜಿ.ಹೆಚ್. ಲೀಲಾ ಕಾರ್ಯಕ್ರಮ ಸಂಯೋಜಿಸಿದ್ದರು.

ಎಂ.ಕೆ. ರಿಷಿಕಾ, ಸೌಜನ್ಯ ಬಿ. ಉಪ್ಪಿನ್ ನಿರೂಪಿಸಿದರು. ಎಂ. ಸಂಪದ ವಂದಿಸಿದರು.